CAREERINDIA

# D

SL. No. : CCC

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 97-K**

**CCE PF**
**CCE PR**
**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**Code No. : 97-K**

ಇಲ್ಲಿ ಕತ್ತರಿಸಿ

## ವಿಷಯ : ರಾಜ್ಯಶಾಸ್ತ್ರ

## Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 02. 04. 2019 ] [ Date : 02. 04. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

www.careerindia.com

CAREERINDIA



I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. 1909 ರಲ್ಲಿ ಜಾರಿಗೆ ಬಂದ ಸುಧಾರಣಾ ಕಾಯ್ದೆ

   (A) ಮಾರ್ಲೆ–ಮಿಂಟೊ

   (B) ಮಾಂಟೆಗೋ–ಚೆಮ್ಸ್ ಫೊರ್ಡ್

   (C) ಭಾರತ ಸರ್ಕಾರ ಕಾಯ್ದೆ

   (D) ರೆಗ್ಯೂಲೆಟಿಂಗ್ ಕಾಯ್ದೆ

2. ಸಂವಿಧಾನದ ಪ್ರಸ್ತಾವನೆಯನ್ನು ವರ್ಣಿಸಿರುವುದು

   (A) ಸಂವಿಧಾನದ ಆತ್ಮ

   (B) ಸಂವಿಧಾನದ ಒಡವೆ

   (C) ಸಂವಿಧಾನದ ಜಾತಕ

   (D) ಸಂವಿಧಾನದ ಇಂಜಿನ್

3. 19 ನೇ ವಿಧಿಯು ಜನಸ್ತೋಮದ ಜೀವಾಳವಾಗಿದೆ. ಏಕೆಂದರೆ,

   (A) ಭೇದಭಾವವನ್ನು ನಿಷೇಧಿಸಿದೆ

   (B) ಸಮಾನತೆಯನ್ನು ನೀಡಿದೆ

   (C) ಆರು ಸ್ವಾತಂತ್ರ್ಯಗಳನ್ನು ಹೊಂದಿದೆ

   (D) ಅಸ್ಪೃಶ್ಯತೆಯನ್ನು ತೊಡೆದು ಹಾಕಿದೆ

4. ರಾಜ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸುವುದು ಯಾವಾಗ ಎಂದರೆ ಒಂದು ರಾಜ್ಯ ಸರ್ಕಾರವು

   (A) ಹೊಸ ಶಾಸನಗಳನ್ನು ಜಾರಿಗೊಳಿಸಿದಾಗ

   (B) ಸಮವರ್ತಿ ಪಟ್ಟಿಯನ್ನು ತಿರಸ್ಕರಿಸಿದಾಗ

   (C) ರಾಷ್ಟ್ರಪತಿ ಚುನಾವಣೆಯನ್ನು ನಡೆಸಲು ತಿರಸ್ಕರಿಸಿದಾಗ

   (D) ಸಂವಿಧಾನಾತ್ಮಕವಾಗಿ ಕಾರ್ಯ ನಿರ್ವಹಿಸಲು ವಿಫಲವಾದಾಗ

www.careerindia.com

CAREERINDIA



5. ಅವಿಶ್ವಾಸ ನಿರ್ಣಯ ತುಂಬಾ ಪ್ರಮುಖವಾಗಿದೆ ಏಕೆಂದರೆ ಅದು

   (A) ಪ್ರಜಾಪ್ರಭುತ್ವದ ಅವನತಿಯನ್ನು ತಡೆಯುತ್ತದೆ

   (B) ವಿರೋಧ ಪಕ್ಷಕ್ಕೆ ಶಕ್ತಿಶಾಲಿ ಆಯುಧವಾಗಿದೆ

   (C) ಸರ್ಕಾರಿ ಅಧಿಕಾರಗಳನ್ನು ತೆಗೆದುಹಾಕುತ್ತದೆ

   (D) ಜನರ ಹಕ್ಕುಗಳನ್ನು ಕಾಪಾಡುತ್ತದೆ

6. ಸರ್ವೋಚ್ಛ ನ್ಯಾಯಾಲಯದ ಕೇಂದ್ರ ಕಚೇರಿ ಇರುವ ಸ್ಥಳ

   (A) ಕೊಲ್ಕತ್ತಾ

   (B) ನವದೆಹಲಿ

   (C) ಮುಂಬೈ

   (D) ಚೆನ್ನೈ

7. ಸಂವಿಧಾನದ 171ನೇ ವಿಧಿಯು ಸಂಬಂಧಿಸಿರುವುದು

   (A) ರಾಜ್ಯಸಭೆ

   (B) ಲೋಕಸಭೆ

   (C) ವಿಧಾನ ಪರಿಷತ್

   (D) ವಿಧಾನ ಸಭಾ

8. ಉಚ್ಛ ನ್ಯಾಯಾಲಯದ ನ್ಯಾಯಾಧೀಶರಿಗೆ ಪ್ರಮಾಣ ವಚನ ಬೋಧಿಸುವವರು

   (A) ಪ್ರಧಾನ ಮಂತ್ರಿ

   (B) ರಾಜ್ಯಪಾಲರು

   (C) ಮುಖ್ಯಮಂತ್ರಿ

   (D) ರಾಷ್ಟ್ರಪತಿ

www.careerindia.com

CAREERINDIA



9. ಗ್ರಾಮೀಣ ಸ್ವಯಂ ಆಡಳಿತದ ಪ್ರಾಥಮಿಕ ಘಟಕ

   (A) ಗ್ರಾಮ ಪಂಚಾಯಿತಿ

   (B) ಜಿಲ್ಲಾ ಪಂಚಾಯಿತಿ

   (C) ಗ್ರಾಮ ಸಭೆ

   (D) ತಾಲ್ಲೂಕು ಪಂಚಾಯಿತಿ

10. ರಾಜ್ಯ ಲೋಕಸೇವಾ ಆಯೋಗವು ರಾಜ್ಯ ಮಂತ್ರಿಮಂಡಲದ ನಿಯಂತ್ರಣದಲ್ಲಿದೆ ಏಕೆಂದರೆ

   (A) ಅಧ್ಯಕ್ಷರು ಮತ್ತು ಸದಸ್ಯರನ್ನು ಅದರ ಸಲಹೆ ಮೇರೆಗೆ ನೇಮಕ ಮಾಡಲಾಗುತ್ತದೆ

   (B) ಅದು ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುತ್ತದೆ

   (C) ಅದು ವೇತನ ಮತ್ತು ಇತರೆ ಭತ್ಯೆಗಳನ್ನು ನೀಡುತ್ತದೆ

   (D) ಸದಸ್ಯರುಗಳು ರಾಜ್ಯ ಸರ್ಕಾರದ ಹಿಂದಿನ ನೌಕರರಾಗಿರುತ್ತಾರೆ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| (A) | ಭಾರತ | (i) | ಡಯಟ್ |
| (B) | ಅಮೆರಿಕಾ | (ii) | ತ್ರಂಗ್‌ಡು |
| (C) | ಬಾಂಗ್ಲಾದೇಶ | (iii) | ಪಾರ್ಲಿಮೆಂಟ್ |
| (D) | ಜಪಾನ್ | (iv) | ಕಾಂಗ್ರೆಸ್ |
| (E) | ನೇಪಾಳ | (v) | ಜಡಿಯಾ ಸನಸದ್ |
| | | (vi) | ರಾಷ್ಟ್ರೀಯ ಪಂಚಾಯತ್ |
| | | (vii) | ನ್ಯಾಷನಲ್ ಅಸೆಂಬ್ಲಿ |



www.careerindia.com

CAREERINDIA



III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. 1858 ರ ವಿಕ್ಟೋರಿಯಾ ರಾಣಿಯ ಘೋಷಣೆಯನ್ನು ಭಾರತದ ಮ್ಯಾಗ್ನಕಾರ್ಟ್ ಎಂದು ಬಣ್ಣಿಸಲಾಗಿದೆ. ಏಕೆ ?

13. ದೇಶವು ತನ್ನ ಪ್ರಜೆಗಳಿಗೆ ಸಂವಿಧಾನದ ಮೂಲಕ ಮೂಲಭೂತ ಹಕ್ಕುಗಳನ್ನು ಏಕೆ ನೀಡಿದೆ ?

14. ಎಂ.ಸಿ. ಛಾವ್ಲರವರ ಪ್ರಕಾರ ಭಾರತವು ಯಾವಾಗ ಭೂಮಿಯ ಮೇಲಿನ ಸ್ವರ್ಗವಾಗುತ್ತದೆ ?

15. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಯಾವ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?

16. ರಾಜ್ಯ ಸಭೆಯು ಹಣಕಾಸು ವಿಷಯದಲ್ಲಿ ಲೋಕಸಭೆಗಿಂತ ತುಂಬಾ ಕಡಿಮೆ ಅಧಿಕಾರ ಹೊಂದಿದೆ. ಏಕೆ ?

17. ಸರ್ವೋಚ್ಚ ನ್ಯಾಯಾಲಯವು ನಮ್ಮ ಸಂವಿಧಾನದ ರಕ್ಷಣೆಯನ್ನು ಹೇಗೆ ಮಾಡುತ್ತದೆ ?

18. 32 ನೇ ವಿಧಿಯನ್ನು ಸಾಮಾಜಿಕ ಪರಿವರ್ತನೆಯ ನ್ಯಾಯಿಕ ಸಾಧನವೆಂದು ಪರಿಗಣಿಸಲಾಗಿದೆ. ಏಕೆ ?

19. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಯಾರು ಪ್ರಮಾಣವಚನ ಬೋಧಿಸುತ್ತಾರೆ ?

20. ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳನ್ನು ಹೇಗೆ ನೇಮಕ ಮಾಡುತ್ತಾರೆ ?

21. ಗ್ರಾಹಕ ರಕ್ಷಣಾ ಕಾಯ್ದೆಯನ್ನು ಯಾವಾಗ ಜಾರಿಗೊಳಿಸಲಾಯಿತು ?

22. ನೆಹರೂರವರು ಸಮುದಾಯ ಅಭಿವೃದ್ಧಿ ಯೋಜನೆಯನ್ನು ಏಕೆ ಜಾರಿಗೊಳಿಸಿದರು ?

23. ಕೌಟಿಲ್ಯನ ಮೇರುಕೃತಿಯನ್ನು ಹೆಸರಿಸಿ.

24. ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಎಲ್ಲಿದೆ ?

25. ರಾಜ್ಯ ಲೋಕಸೇವಾ ಆಯೋಗದ ಸದಸ್ಯರನ್ನು ಅಧಿಕಾರದಿಂದ ಹೇಗೆ ಪದಚ್ಯುತಿಗೊಳಿಸುತ್ತಾರೆ ?

26. ಸಂವಿಧಾನದ 315ನೇ ವಿಧಿಯ ಪ್ರಾಮುಖ್ಯತೆಯೇನು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** 24 × 2 = 48

27. ಭಾರತವು ಏಕಾತ್ಮಕ ಚೌಕಟ್ಟಿನೊಳಗೆ ಸಂಯುಕ್ತ ವ್ಯವಸ್ಥೆಯನ್ನು ಹೊಂದಿದೆ. ಹೇಗೆ ?

28. ಭಾರತವು ಸರ್ವಧರ್ಮ ಸಮಭಾವದ ನೀತಿಯನ್ನು ಅನುಸರಿಸುತ್ತಿದೆ. ಸಮರ್ಥಿಸಿ.

www.careerindia.com

CAREERINDIA



29. ಸಾಮಾಜಿಕ ನ್ಯಾಯ ಮತ್ತು ರಾಜಕೀಯ ನ್ಯಾಯಗಳನ್ನು ಹೇಗೆ ಒದಗಿಸಬಹುದು ?

30. ಮಾಹಿತಿ ಹಕ್ಕು ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಗಿದೆ ?

31. ಬಂಧೀ ಪ್ರತ್ಯಕ್ಷೀಕರಣ ( Habeas corpus ) ಸ್ವಾತಂತ್ರ್ಯವನ್ನು ಹೇಗೆ ರಕ್ಷಿಸುತ್ತದೆ ?

32. ಯಾವುದಾದರೂ ಎರಡು ಗಾಂಧೀವಾದದ ತತ್ವಗಳನ್ನು ತಿಳಿಸಿ.

33. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಲು ರಾಜ್ಯನೀತಿ ನಿರ್ದೇಶಕ ತತ್ವಗಳ ಆಧಾರದ ಮೇಲೆ ಜಾರಿಗೆ ತಂದಿರುವ ಕಾರ್ಯಕ್ರಮಗಳಾವುವು ?

34. ರಾಷ್ಟ್ರಪತಿಯವರ ಮಿಲಿಟರಿ ಅಧಿಕಾರಗಳನ್ನು ತಿಳಿಸಿ.

35. ಸರ್ವೋಚ್ಛ ನ್ಯಾಯಾಲಯವು ದಾಖಲೆಗಳ ನ್ಯಾಯಾಲಯವಾಗಿದೆ. ಏಕೆ ?

36. ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಲು ಬೇಕಾಗಿರುವ ಅರ್ಹತೆಗಳೇನು ?

37. ರಾಜ್ಯ ಮಂತ್ರಿಮಂಡಲವು ಆ ರಾಜ್ಯದ ಮುಖ್ಯಮಂತ್ರಿಯಿಂದ ನಿಯಂತ್ರಿಸಲ್ಪಡುತ್ತದೆ. ಸಮರ್ಥಿಸಿ.

38. ವಿಧಾನ ಪರಿಷತಿನ ಕಾರ್ಯಾಂಗೀಯ ಅಧಿಕಾರಗಳನ್ನು ಪಟ್ಟಿ ಮಾಡಿ.

39. ವಿಧಾನಸಭೆಯ ಚುನಾವಣಾ ಅಧಿಕಾರವನ್ನು ವಿವರಿಸಿ.

40. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

41. ಸರ್ವೋಚ್ಛ ನ್ಯಾಯಾಲಯವು ತನ್ನ ಅಪೀಲು ಅಧಿಕಾರವನ್ನು ಹೇಗೆ ನಿರ್ವಹಿಸುತ್ತದೆ ?

42. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ಹೆಸರಿಸಿ.

43. ದಂಡು ಪ್ರದೇಶ (ಕಂಟೋನ್ಮೆಂಟ್ ಬೋರ್ಡ್) ಗಳು ಹೇಗೆ ರಚನೆಯಾಗಿವೆ ?

44. 1983 ರ ಪಂಚಾಯ್ತಿ ಕಾಯ್ದೆಯನ್ನು ಸ್ಥಳೀಯ ಸರ್ಕಾರದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದು ಪರಿಗಣಿಸಲಾಗಿದೆ. ಏಕೆ ?

www.careerindia.com

CAREERINDIA



45. ಜನತಾ ನ್ಯಾಯಾಲಯ (ಲೋಕ ಅದಾಲತ್) ಗಳನ್ನು ಏಕೆ ಸ್ಥಾಪಿಸಲಾಗಿದೆ ?

46. ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ನೀಡಿರುವ ವಿನಾಯಿತಿಗಳೇನು ?

47. ಒಂದು ರಾಜ್ಯದ ರಾಜ್ಯಪಾಲರಾಗಲು ಬೇಕಾಗಿರುವ ಅರ್ಹತೆಗಳೇನು ?

48. ಮುಖ್ಯಮಂತ್ರಿ ರಾಜ್ಯದ ಸಮಸ್ತ ಅಧಿಕಾರದ ನೇತಾರ. ವಿವರಿಸಿ.

49. ಶೂನ್ಯವೇಳೆ ಎಂದರೇನು ?

50. ಭಾರತವು ಒಂದು ಗಣರಾಜ್ಯವಾಗಿದೆ. ವಿವರಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ *ಐದರಿಂದ ಆರು* ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

51. 1935 ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳೇನು ?

52. ರಾಜ್ಯನೀತಿ, ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

53. ಪ್ರಧಾನ ಮಂತ್ರಿಗಳ ಅಧಿಕಾರ ಮತ್ತು ಕಾರ್ಯಗಳನ್ನು ಪಟ್ಟಿ ಮಾಡಿ.

54. ರಾಜ್ಯ ಮಂತ್ರಿಮಂಡಲ ನಿರ್ವಹಿಸುವ ಕಾರ್ಯಗಳೇನು ?

55. ಪ್ರಮುಖ ಕಂದಾಯ ನ್ಯಾಯಾಲಯಗಳನ್ನು ಹೆಸರಿಸಿ.

56. ಗ್ರಾಮ ಪಂಚಾಯಿತಿಯ ಯಾವುದಾದರೂ ಆರು ಕಾರ್ಯಗಳನ್ನು ತಿಳಿಸಿ.

VI. **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ :** $1 \times 4 = 4$

57. ಲೋಕಸಭೆಯ ಸಭಾಪತಿಯ ಕಾರ್ಯ ಮತ್ತು ಅಧಿಕಾರಗಳನ್ನು ವಿವರಿಸಿ.

www.careerindia.com

www.careerindia.com